ಶ್ರೀ ಬಿ. ರಮಾನಾಥ್ ರೈ :— ಮಾನ್ಯ ಅಧ್ಯಕ್ಷರೆ, ಕೆಲವು ಕಡೆ ಹೆಚ್ಚು ಕಡಿಮೆ ಖರ್ಚು ಆಗಿರತಕ್ಕಂಥ ವಿಷಯದ ಬಗ್ಗೆ ಈಗಾಗಲೇ ಮಂಡಳಿಯಲ್ಲಿ ಚರ್ಚೆಯಾಗಿದೆ. ವಿವೇಚನಾ ನಿಧಿ ಮತ್ತು ನಬಾರ್ಡ್ ನೆರವನ್ನು ಮಂಡಳಿಗೆ ಸಮಾನವಾಗಿ ಹಂಚ್ಚುತ್ತೇವೆಂದು ಚರ್ಚೆಯ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಎಲ್ಲರಿಗೂ ಸಮಾನವಾಗಿ ಸಿಗತಕ್ಕಂಥದ್ದು ನನ್ನ ಉದ್ದೇಶವಾಗಿದೆ. ನಬಾರ್ಡ್ ಗೈಡ್‌ಲೈನ್ಸ್ ಪ್ರಕಾರ ಏನಾದರೂ ತೊಂದರೆಯಾಗಿ ಖರ್ಚಿನಲ್ಲಿ ಹೆಚ್ಚು ಕಡಿಮೆಯಾಗಿದ್ದರೆ, ಅದಕ್ಕೆ ಮಂಜೂರಾತಿ ಕೊಡುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ :— ಮಾನ್ಯ ಅಧ್ಯಕ್ಷರೆ, ಇನ್ನು ಕೆಲವು ಕಾಮಗಾರಿಗಳು ಪೂರ್ಣವಾಗದೇ ಹಾಗೆ ಉಳಿದಿವೆ. ಜೊತೆಗೆ ಇನ್ನು ಕೆಲವು ರಸ್ತೆ ಕಾಮಗಾರಿಗಳ ಫೈಲ್ ಮುಖ್ಯ ಇಂಜಿನಿಯರ್ ರವರ ಕಛೇರಿಗೆ ಬಂದಿದೆ. ಆದ್ದರಿಂದ ಆದಷ್ಟು ಜಾಗ್ರತೆ ಸದರಿ ಕೆಲಸಗಳಿಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ.

248(2686) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಲೋಕೋಪಯೋಗಿ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಯೋಜನೆಗೆ ಯಾರಿಂದ ನೆರವನ್ನು ಪಡೆಯಲಾಗುತ್ತಿದೆ; ಎಷ್ಟು ಕೋಟಿ ರೂಪಾಯಿಗಳ ನೆರವನ್ನು ಪಡೆಯಲಾಗುತ್ತಿದೆ; ಇದರಲ್ಲಿ ರಾಜ್ಯ ಪಾಲು ಎಷ್ಟು:

ಆ) ಈ ಹಣದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ; (ಜಿಲ್ಲಾವಾರು ಕಿಲೋಮೀಟರ್‌ವಾರು ಮಾಹಿತಿ ನೀಡುವುದು)

ಇ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ; ಇನ್ನು ಎಷ್ಟು ವರ್ಷಗಳಲ್ಲಿ ಸದರಿ ಯೋಜನೆ ಪೂರ್ಣಗೊಳ್ಳಲಿದೆ;

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿರು) :—

ಅ) ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಪುನ:ಶ್ಚೇತನಗೊಳಿಸಲು ವಿಶ್ವಬ್ಯಾಂಕ್‌ನಿಂದ 1637 ಕೋಟಿ ರೂ.ಗಳ ಸಾಲವನ್ನು ಪಡೆಯಲಾಗುತ್ತಿದೆ. ರಾಜ್ಯದ ಪಾಲು 396 ಕೋಟಿ ರೂ.ಗಳು.

ಆ) ಈ ಹಣದಲ್ಲಿ 995 ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸಲು ಹಾಗೂ 1276 ಕಿಮೀ. ರಸ್ತೆಯನ್ನು ಪುನ:ಶ್ಚೇತನಗಳಿಸಲು ಯೋಜಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಲಾಗಿದೆ.

ಇ) ಈ ಯೋಜನೆಯ ಮೊದಲ ಹಂತದಲ್ಲಿ 377 ಕಿ.ಮೀ. ಉದ್ದದ ರಸ್ತೆಯನ್ನು ಮೇಲ್ದರ್ಜೆಗೇರಿಸಲು 4 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದದಿದ್ದು, ಟೆಂಡರ್ ಪರಿಶೀಲನೆಯಲ್ಲಿದೆ.

ಪುನ:ಶ್ಚೇತನಗೊಳಿಸುವ 445 ಕಿಮೀ. ಉದ್ದದ ರಸ್ತೆಯನ್ನು 11 ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿದ್ದು. ಐದು ಪ್ಯಾಕೇಜಿನ ಟೆಂಡರ್‌ಗಳು ಪರಿಶೀಲನೆಯಲ್ಲಿವೆ. ಉಳಿದ 6 ಪ್ಯಾಕೇಜ್‌ಗಳ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 6-8-2001. ಪುನ:ಶ್ಚೇತನಗೊಳಿಸಬೇಕಾದ ಉಳಿದ 403 ಕಿಮೀ. ಉದ್ದದ ರಸ್ತೆಗೆ ಟೆಂಡರ್ ಕರೆಯಬೇಕಾಗಿದೆ. ಎರಡನೇ ಹಂತದ ಕಾಮಗಾರಿಗಳಿಗೆ ಯೋಜನಾ ವರದಿ ಮುಗಿದಿದ್ದು, ವರದಿಯನ್ನು ಪರಿಶೀಲಿಸಲಾಗುತ್ತಿದೆ.

ಈ) ಈ ಯೋಜನೆಯ ಎರಡೂ ಹಂತಗಳ ಕಾಮಗಾರಿಗಳನ್ನು 5½ ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

District-wise cost bifurcation of

District	Phase I					
	Upgradation		Rehabilitation		Total	
	Length Kms.	Cost in Crores	Length Kms.	Cost in Crores	Length Kms.	Cost in Crores
1	2	3	4	5	6	7
Raichur	127.791	135.450	123.227	38.570	251.018	174.020
Bijapur	20.156	21.360	20.000	6.260	40.156	27.620
Koppal	57.538	60.990	0.000	0.000	57.538	60.990
Gulbarga	130.960	138.810	43.380	13.570	174.340	152.380
Bidar	60.417	64.040	0.000	0.000	60.417	64.040
Bagalkot	0.000	0.000	25.000	7.820	25.000	7.820
Belgaum	0.000	0.000	128.000	40.060	128.000	40.060
Gadag	0.000	0.000	0.000	0.000	0.000	0.000
Dharwad	0.000	0.000	0.000	0.000	0.000	0.000
Uttara Kannada	0.000	0.000	0.000	0.000	0.000	0.000
Mysore	0.000	0.000	0.000	0.000	0.000	0.000
Mandya	0.000	0.000	74.960	23.460	74.960	23.460
Tumkur	0.000	0.000	81.470	25.500	81.470	25.500
Chitra-durga	0.000	0.000	38.720	12.110	38.720	12.110
Bellary	0.000	0.000	99.880	31.250	99.880	31.260
Davangere	0.000	0.000	114.102	35.710	114.102	35.710
Shimoga	0.000	0.000	19.000	5.940	19.000	5.940
Hassan	0.000	0.000	7.500	2.340	7.500	2.340
Chick-magalur	0.000	0.000	72.980	22.840	72.980	2.340
Total	*396.862*	*420.650*	*848.219*	*265.440*	*1245.081*	*686.090*
Bypasses	-	-	-	-	-	-
Grand Total	-	-	-	-	-	-

Karnataka State Highways Improvement Project (KSHIP) Raods

Phase II							
Upgradation		Rehabilitation		Total		**Grand Total**	
Length Kms.	Cost in Crores	Length Kms.	Cost in Crores	Length Kms.	Cost in Crores	Length Kms.	Cost in Crores
8	9	10	11	12	13	14	15
0.000	0.000	96.600	30.230	96.600	30.230	347.618	204.250
71.460	75.740	0.000	0.000	71.460	75.740	111.616	103.360
0.000	0.000	0.000	0.000	0.000	0.000	57.538	60.990
0.000	0.000	0.000	0.000	0.000	0.000	174.340	152.380
0.000	0.000	0.000	0.000	0.000	0.000	60.417	64.040
84.240	89.290	0.000	0.000	84.240	89.290	109.240	97.110
235.540	249.670	34.200	10.700	269.740	260.370	397.740	300.430
10.840	11.490	0.000	0.000	10.840	11.490	10.840	11.490
2.000	2.120	2.000	0.620	4.000	2.740	4.000	2.740
0.000	0.000	235.400	73.680	235.400	73.680	235.400	73.680
0.000	0.000	60.600	18.960	60.600	18.960	60.600	18.960
0.000	0.000	0.000	0.000	0.000	0.000	74.960	23.460
0.000	0.000	0.000	0.000	0.000	0.000	81.470	25.500
115.242	122.150	0.000	0.000	115.242	122.150	153.962	134.260
29.000	30.740	0.000	0.000	29.000	30.740	128.880	62.000
0.000	0.000	0.000	0.000	0.000	0.000	114.102	35.710
0.000	0.000	0.000	0.000	0.000	0.000	19.000	5.940
0.000	0.000	0.000	0.000	0.000	0.000	7.500	2.340
0.000	0.000	0.000	0.000	0.000	0.000	72.980	22.840
548.322	*581.200*	*428.800*	*134.190*	*977.122*	*715.390*	*2222.203*	*1401.480*
-	-	50.000	54.830	50.000	54.830	50.000	54.830
-	-	478.800	189.020	1027.122	770.220	2272.203	1456.310

1.40 ಪಿ.ಎಂ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಯೋಜನೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಮಲೆನಾಡು ಪ್ರದೇಶಗಳಾದ ದಕ್ಷಿಣ ಕನ್ನಡ, ಕೊಡಗು, ಉಡುಪಿ ಈ ಜಿಲ್ಲೆಗಳನ್ನು ತಾವು ಪೂರ್ತಿಯಾಗಿ ಕೈಬಿಟ್ಟಿದ್ದೀರಿ. 19 ಜಿಲ್ಲೆಗಳನ್ನು ತೆಗೆದುಕೊಂಡು ಉಳಿದ ಜಿಲ್ಲೆಗಳನ್ನು ಕೈಬಿಡಲು ಕಾರಣವೇನು? ಆ ಭಾಗದಲ್ಲಿ ಹೆಚ್ಚಿನ ಮಳೆ ಬಂದು ರಸ್ತೆಗಳು ಹಾಳಾಗುವ ವಿಚಾರ ತಮ್ಮ ಗಮನದಲ್ಲಿದ್ದರೂ ಕೂಡ ಆ ಭಾಗದಲ್ಲಿರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ಪುನಃಶ್ಚೇತನಗೊಳಿಸದಿರುವುದಕ್ಕೆ, ಹಣ ಕೊಡದಿರುವುದಕ್ಕೆ ಕಾರಣವೇನು? ಮೈಸೂರು-ಬಂಟ್ವಾಳ ರಸ್ತೆಗೆ ತಾತ್ಕಾಲಿಕವಾಗಿ 1.45 ಕೊಟಿ ರೂಪಾಯಿಗಳನ್ನು ಕೊಟ್ಟಿರುವುದಕ್ಕಾಗಿ ನಿಮಗೆ ಅಭಿನಂದನೆಗಳು. ಆದರ ಕೆಲಸ ಪೂರ್ತಿಯಾಗಿ ಆಗಲಿಲ್ಲ. ನೇರವಾಗಿ ಈ ಯೋಜನೆಯಲ್ಲಿ ಇದನ್ನು ಸೇರಿಸುವುದಕ್ಕೆ ಕಾರಣವೇನು? ವಿಶ್ವಬ್ಯಾಂಕಿನ ಯೋಜನೆಗಳ ಬಗ್ಗೆ ಘೋಷಣೆಯಾದ ಬಗ್ಗೆ ಪತ್ರಿಕೆಯಲ್ಲಿ ಬಂದಿದ್ದು ಇರುತ್ತದೆ. ಆದರೆ ಆದು ಯಾವುದು ಇಲ್ಲಿ ಕಾಣಿಸುತ್ತಿಲ್ಲ. ಈ ಜಿಲ್ಲೆಗಳನ್ನು ಇದರಲ್ಲಿ ಸೇರಿಸದಿರುವುದಕ್ಕೆ ಕಾರಣವೇನು?

ಶ್ರೀ ಧರ್ಮಸಿಂಗ್ :— ನಾವು ಉದ್ದೇಶಪೂರ್ವಕವಾಗಿ ಬಿಟ್ಟಿರುವುದಿಲ್ಲ. ಇದು ಏನಾಗಿದೆ ಎಂದರೆ, ವಿಶ್ವ ಬ್ಯಾಂಕಿನ ನೆರವನ್ನು ಪಡೆಯತಕ್ಕಂಥ ರೀತಿಯಲ್ಲಿ, ರಾಜ್ಯದಲ್ಲಿ 2300 ಕಿ.ಮೀ.ಗೆ ಅಪ್ ಗ್ರೇಡೇಷನ್ ತೆಗೆದುಕೊಳ್ಳತಕ್ಕಂಥದ್ದು, ರಿಹ್ಯಾಬಿಲಿಟೇಷನ್‌ಗೆ ತೆಗೆದುಕೊಳ್ಳತಕ್ಕಂಥದ್ದು ಮಾಡಿರುತ್ತೇವೆ. ಅದರಲ್ಲಿ 19 ಜಿಲ್ಲೆಗಳು ಕವರ್ ಆಗಿರುತ್ತವೆ. ತಮ್ಮ ಜಿಲ್ಲೆ ಕವರ್ ಆಗಿಲ್ಲವೆಂದರೂ ಕೂಡ ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ದಿಂದು, ರಾಜ್ಯ ಹೆದ್ದಾರಿಯನ್ನು ಕೂಡ ದುರಸ್ಥಿ ಮಾಡುವ ಕ್ರಮವನ್ನು ತೆಗೆದುಕೊಂಡಿರುತ್ತೇವೆ. ಸ್ಟೇಟ್ ಹೈವೇ ಮೆಂಟೆನೆನ್ಸ್‌ನಲ್ಲಿ ಕೂಡ ಉಡುಪಿ-ಮಂಗಳೂರಿನಲ್ಲಿ ಕೂಡ ಕ್ರಮವನ್ನು ತೆಗೆದುಕೊಂಡು ಈಗಾಗಲೇ ಕೆಲಸ ಪ್ರಾರಂಭವಾಗಿರುತ್ತದೆ. ಎನ್‌ಹೆಚ್-13 ಸೋಲಾಪುರ-ಚಿತ್ರದುರ್ಗ ಏನು ಮೊದಲಿತ್ತು, ಚಿತ್ರದುರ್ಗದಿಂದ ಮಂಗಳೂರು ವರೆಗೆ ಎನ್.ಹೆಚ್ ಎಂದು ಡಿಕ್ಲೇರ್ ಆಗಿರುತ್ತದೆ. (ಸೋಲಾಪುರ-ಚಿತ್ರದುರ್ಗ-ಚನ್ನಗಿರಿ-ಶಿವಮೊಗ್ಗ-ತೀರ್ಥಹಳ್ಳಿ-ಶೃಂಗೇರಿ-ಕಾರ್ಕಳ-ಮಂಗಳೂರು) ಎಲ್ಲೆಲ್ಲಿ ಎನ್‌ಹೆಚ್ ಎಂದು ಡಿಕ್ಲೇರ್ ಆಗಿದೆ, ಆಲ್ಲಿಗೆ ಹೋಗಿ ಆ ರಸ್ತೆ ಸೇರುತ್ತದೆ. ಮೈಸೂರು-ಬಂಟ್ವಾಳ 213 ಕಿ.ಮಿ. ಏನು ಬರುತ್ತದೆ, ಇದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಲೇಷಿಯಾದ ಸಿಐಡಿಬಿ ಏನು ಇದೆ, ಅವರು ಬಂದು ಹೋಗಿದ್ದಾರೆ. ಅವರ ಜೊತೆಯಲ್ಲಿ ಎರಡು ಸುತ್ತಿನ ಮಾತುಕತೆ ಕೂಡ ಆಗಿದೆ. ಅವರೂ ಕೂಡ ಡೆಫರ್ಡ್ ಪೇಮೆಂಟ್ ಮೇಲೆ ಮಾಡಲು ಒಪ್ಪಿದ್ದಾರೆ. ಅದನ್ನು ಮಾಡತಕ್ಕಂಥದ್ದು ಪರಿಶೀಲನೆಯಲ್ಲಿದೆ. ಬೆಂಗಳೂರಿನಿಂದ ತಮ್ಮ ಕ್ಷೇತ್ರಕ್ಕೆ ಹೋಗುವ ರಸ್ತೆಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ 1.45 ಕೋಟಿ

ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಆ ಕೆಲಸ ಕೂಡ ಪ್ರಾರಂಭವಾಗಿ ಇವತ್ತು ಅದು ಮುಗಿಯುವ ಹಂತದಲ್ಲಿದೆ. ಯಾವ ಜಿಲ್ಲೆಯನ್ನೂ ಬಿಡತಕ್ಕಂಥದ್ದು ಇರುವುದಿಲ್ಲ. 10,800 ಕಿ.ಮೀ. ಏನು ಸ್ಟೇಟ್ ಹೈವೇ ಇದೆ, ಅದನ್ನು ದುರಸ್ತಿ ಮಾಡುವುದಕ್ಕೆ ನಮ್ಮ ಸರ್ಕಾರದಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ :— ತಾವು ಟೆಂಡರ್‌ಗಳನ್ನು ಕರೆದು 11 ಪ್ಯಾಕೇಜ್‌ನಲ್ಲಿ ಕೆಲಸವನ್ನು ಕೊಡುವುದಾಗಿ ಹೇಳಿರುತ್ತೀರಿ. ಪ್ಯಾಕೇಜ್ ಟೆಂಡರ್‌ಗಳಿಂದ ಆಗುವ ಅನಾಹುತದ ಬಗ್ಗೆ ಮೊನ್ನೆ ಸದನದಲ್ಲಿ ಪ್ರಸ್ತಾಪವಾಗಿರುವ ಬಗ್ಗೆ ತಮಗೆ ಗೊತ್ತಿದೆ. ಕಂಟ್ರಾಕ್ಟ್‌ದಾರರು, ಅವರು ಪುನ: ಸಬ್ ಕಂಟ್ರಾಕ್ಟ್‌ದಾರರಿಗೆ ಕೊಡತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿರುವುದಾಗಿ ನಾನು ಭಾವಿಸುತ್ತೇನೆ. ನಮ್ಮ ರಾಜ್ಯದವರಲ್ಲದೆ ಬೇರೆ ರಾಜ್ಯದವರು ಪ್ಯಾಕೇಜ್ ಟೆಂಡರ್‌ಗಳನ್ನು ಪಡೆದುಕೊಂಡಿರುವುದರಿಂದ ನಮ್ಮ ರಾಜ್ಯದಲ್ಲಿರುವ ಕೆಲಸಗಾರರಿಗೆ ಕೆಲಸವಿಲ್ಲದಂತಾಗಿದೆ, ಆ ಭಾಗದಿಂದ ಬರುವ ಜನರಿಗೆ ಕೆಲಸ ಸಿಗುತ್ತದೆ. ಅವರು ಸಬ್ ಕಂಟ್ರಾಕ್ಟ್‌ದಾರರಿಗೆ ಆ ಕೆಲಸವನ್ನು ಕೊಟ್ಟು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವಂಥಾದ್ದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ತಮ್ಮ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು.

ಶ್ರೀ ಧರ್ಮಸಿಂಗ್ :— ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನವರ ಒಂದು ಗೈಡ್‌ಲೈನ್ಸ್ ಇದೆ. ಒಂದು ಪ್ಯಾಕೇಜ್‌ನಲ್ಲಿ 30 ಕಿ.ಮಿ. ಒಂದೇ ಕಡೆ ಕೆಲಸವಾಗುತ್ತದೆ, ಅವರು ಬಂದು ನೋಡಿಕೊಳ್ಳುತ್ತಾರೆಂದು ನಾವು ಪ್ಯಾಕೇಜ್ ಕೆಲಸವನ್ನು ಮಾಡಿರುತ್ತೇವೆ. ಪ್ಯಾಕೇಜ್ ಕೆಲಸವೆಂದರೆ ಎಲ್ಲೋ ಕುಳಿತುಕೊಂಡು ಸೆಕ್ರೆಟೇರಿಯೇಟ್‌ನಲ್ಲಿ ಮಾಡುವಂಥದ್ದಲ್ಲ. ಅದು ಮೂರು ಹಂತದಲ್ಲಿರುತ್ತದೆ. ಒಂದು ಕಡೆ ಮೂರು ಸಿಇಗಳು ಇರುತ್ತಾರೆ, ಪ್ರಾಜೆಕ್ಟ್ ಡೈರೆಕ್ಟರ್‌ಗಳು ಇರುತ್ತಾರೆ, ಹಣಕಾಸು ಕಾರ್ಯದರ್ಶಿ ಇರುತ್ತಾರೆ ಹಾಗೂ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯ ಒಂದು ಗವರ್ನಿಂಗ್ ಬಾಡಿ ಇದೆ. ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಎಂಪವರ್ ಕಮಿಟಿ ಎಂದು ಇದೆ. ಪ್ಯಾಕೇಜ್ ಕೆಲಸಗಳನ್ನು ಸಂಪೂರ್ಣವಾಗಿ ಮಾಡಬೇಕಾದರೆ, ಅವನ ಅನುಭವ ಏನು ಇದೆ, ಅವನು ಇಷ್ಟು ಹಣವನ್ನು ಖರ್ಚು ಮಾಡಬೇಕಾದರೆ, ಸಮರ್ಪಕವಾಗಿ ಕೆಲಸವನ್ನು ಮಾಡತಕ್ಕಂಥ ರೀತಿಯಲ್ಲಿ ಇವತ್ತು ನಾವು ಈ ರಾಜ್ಯದಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ಇದರಲ್ಲಿ ಸಬ್ ಕಾಂಟ್ರಾಕ್ಟ್ ಕೊಡತಕ್ಕಂಥ ಪ್ರಾವಿಜನ್ ಇಲ್ಲ, ಐಸಿಬಿಯಲ್ಲಿ 10 ಪರ್ಸೆಂಟ್ ಸಬ್ ಕಾಂಟ್ರಾಕ್ಟ್‌ದಾರರಿಗೆ ಕೂಲಿ ಕೊಡತಕ್ಕಂಥದ್ದು ಇದೆ, ಎನ್‌ಸಿಟಿಯಲ್ಲಿ 20 ಪರ್ಸೆಂಟ್ ಸಬ್ ಕಾಂಟ್ರಾಕ್ಟರ್‌ಗೆ ಪ್ರಾವಿಷನ್ ಇದೆ. ಎಲ್ಲೆಲ್ಲಿ ಸಬ್ ಕಾಂಟ್ರಾಕ್ಟ್ ಕೊಡತಕ್ಕಂಥದ್ದು ಇದೆ, ಅದು ನಮ್ಮ ಗಮನಕ್ಕೆ ಬಂದಾಗ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಲ್ಲಿಸಿರುವ ಪಟ್ಟಿಯನ್ನು ನೋಡಿದಾಗ, ಅದರಲ್ಲಿ ಬರೀ 19 ಜಿಲ್ಲೆಗಳು ಮಾತ್ರ ಸೇರಿರುತ್ತವೆ. ಇವರು ಇನ್ನುಳಿದ 8 ಜಿಲ್ಲೆಗಳನ್ನು ಕೈಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು? 8 ಜಿಲ್ಲೆಗಳಲ್ಲಿ ಉಳಿಯುವ ಕೆಲಸವನ್ನು ಯಾವ ಯೋಜನೆ ಮುಖಾಂತರ ತೆಗೆದುಕೊಳ್ಳುತ್ತೀರಿ? ಇರುವ 10,800 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಪಡಿಸುವುದರ ಬಗ್ಗೆ ಆಲೋಚನೆ ಸರ್ಕಾರಕ್ಕಿರುತ್ತದೆ. ಒಂದು ಕಡೆ ನೀವು ರಸ್ತೆಯನ್ನು ಅಭಿವೃದ್ಧಿಪಡಿಸಿ, ಎರಡು ಮೂರು ಜಿಲ್ಲೆಗಳಿಗೆ ಒಂದೇ ರಸ್ತೆ ಹೋಗಿರುತ್ತದೆ. ಒಂದು ಜಿಲ್ಲೆಯ ರಸ್ತೆ ಅಭಿವೃದ್ಧಿಯಾಗಿ ಇನ್ನೊಂದು ಜಿಲ್ಲೆ ಅಭಿವೃದ್ಧಿಯಾಗದಿದ್ದರೆ ಇದು ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಕಂಟಿನ್ಯೂಟಿ ಇರಬೇಕಾಗುತ್ತದೆ. ತಾವು ಕೋಲಾರ ಜಿಲ್ಲೆಯ ರಸ್ತೆಯ ಬಗ್ಗೆ ಏನು ಮಾಡುತ್ತೀರಿ ಎನ್ನುವುದರ ಬಗ್ಗೆ ದಯಮಾಡಿ ತಿಳಿಸಬೇಕು

ಅಧ್ಯಕ್ಷರು :— ತಾವು ಕೋಲಾರ ಜಿಲ್ಲೆಯನ್ನು ಬಿಟ್ಟಿದ್ದೀರಲ್ಲಾ?

ಶ್ರೀ ಎಂ.ಪಿ. ಅಪಚ್ಚು ರಂಜನ್ :— ಕೊಡಗು ಜಿಲ್ಲೆಯನ್ನು ಬಿಟ್ಟಿದ್ದಾರೆ, ನೀವು ಏಕೆ ತಾರತಮ್ಯವನ್ನು ಮಾಡುತ್ತಿದ್ದೀರಿ. ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆ ಬಂದು ಮೈಸೂರು ಹಾಗೂ ಮಂಡ್ಯ ಜಿಲ್ಲೆಗೆ ನೀರನ್ನು ಕೊಡುತ್ತಿದ್ದು, ಇವತ್ತು ಈ ಜಿಲ್ಲೆಯನ್ನು ಕಡೆಗಣಿಸಿದರೆ ಹೇಗೆ? ಕೊಡಗು ಜಿಲ್ಲೆಗೆ ಹಣವನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :— ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನಿಂದ ನೆರವು ಪಡೆದು ರಸ್ತೆಯನ್ನು ಅಭಿವೃದ್ಧಿ ಮಾಡುವಂಥದ್ದು ನಮ್ಮ ಸರ್ಕಾರ ಬಂದ ನಂತರ ಮಾಡಿರುವುದು ಅಲ್ಲ. ಇದನ್ನು 1996ರಲ್ಲಿಯೇ ಮಾಡಲಾಗಿದೆ. ನಮ್ಮ ಸರ್ಕಾರ ಬಂದ ಮೇಲೆ ಅಪ್ರೈಸಲ್ ರಿಪೋರ್ಟ್ ಕರೆಕ್ಟ್ ಆಗಿ ಮಾಡಿ ಇದೀ ರಾಷ್ಟ್ರದಲ್ಲಿಯೇ ನಾವು ಲೋಕೋಪಯೋಗಿ ಇಲಾಖೆಗೆ ಲೋನ್ ನ್ನು ತೆಗೆದುಕೊಂಡು ಬಂದಿರುತ್ತೇವೆ. ಕೆಲವು ಜಿಲ್ಲೆಗಳನ್ನು ಸೇರಿಸಬೇಕು, ಕೆಲವು ಜಿಲ್ಲೆಗಳನ್ನು ಬಿಡಬೇಕು ಎನ್ನುವುದು ನಮ್ಮ ನಿರ್ಧಾರವಲ್ಲ. ಕನ್ನಲ್ಟೆಂನ್ಸಿಯವನು ಏನು ಮಾಡಿದ್ದಾನೆ ಅದನ್ನು ಇವತ್ತು ನಾವು ಮಾಡಿದ್ದೇವೆ. ರಾಜ್ಯದಲ್ಲಿರುವ 10,800 ಕಿ.ಮೀ. ರಸ್ತೆಗೆ ನಾವು ಒಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆ. 2300 ಕಿ.ಮೀ. ರಸ್ತೆ ವಿಶ್ವಬ್ಯಾಂಕಿನಲ್ಲಿ ಬರುತ್ತದೆ. 7600 ಕಿ.ಮೀ. ಸ್ಟೇಟ್ ಹೈವೇ ರಸ್ತೆಯಲ್ಲಿ ಕವರ್ ಆಗುತ್ತದೆ. 1000 ಕಿ.ಮೀ. ರಸ್ತೆಯನ್ನು ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಆಫ್ ಹುಡ್ಕೋದಿಂದ ನಾವು ಮಾಡುತ್ತಿದ್ದೇವೆ. 8 ಜಿಲ್ಲೆಗಳಲ್ಲಿ ಎಲ್ಲೆಲ್ಲಿ ರಸ್ತೆ ಬಿಟ್ಟು ಹೋಗಿದೆ ಅದನ್ನು ಸಮರ್ಪಕವಾಗಿ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ, ತೀವ್ರವಾಗಿ ಪ್ರಾರಂಭಮಾಡುವ ಕಾರ್ಯಕ್ರಮ ಕೂಡ ಇದೆ. ಮೈಸೂರು-ಬಂಟ್ವಾಳ ರಸ್ತೆ ಕೊಡಗು ಜಿಲ್ಲೆಗೆ ಹೋಗುತ್ತದೆ, ಅದನ್ನೂ ಕೂಡ ನಾವು ಸೇರಿಸಿಕೊಂಡಿರುತ್ತೇವೆ.

ಶ್ರೀ ಸಿ. ಬೈರೇಗೌಡ :— ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಹೈವೇ ರಸ್ತೆಗಳು ಹೋಗುತ್ತವೆ ಎನ್ನುವ ಮಾತನ್ನು ಹೇಳಿದರು. ಒಂದು ಹೊಸ ಹೈವೇ ರಸ್ತೆಯನ್ನು ಕೋಲಾರ ಜಿಲ್ಲೆಗೆ ತೆಗೆದುಕೊಂಡಿರುವುದಿಲ್ಲ. ಅಭಿವೃದ್ಧಿಯಾದ ಜಿಲ್ಲೆಗಳನ್ನು ಹಾಗೂ ಅಭಿವೃದ್ಧಿಯಾಗದಿರುವ ಜಿಲ್ಲೆಗಳನ್ನು ಸಮಾನಾಂತರದಿಂದ ನೋಡುವ ಪರಿಸ್ಥಿತಿ ಉಂಟಾದರೆ ಹೇಗೆ? ವಿಶೇಷವಾಗಿ ಈ ಜಿಲ್ಲೆಯಲ್ಲಿರುವ ರಸ್ತೆಗಳನ್ನು ಮಾಡಬೇಕು.

ಶ್ರೀ ಧರ್ಮಸಿಂಗ್ :— ಮಾನ್ಯ ಅಧ್ಯಕ್ಷರೆ, ನಾನು ಕೋಲಾರ ಜಿಲ್ಲೆಗೆ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಆಶ್ವಾಸನೆಯನ್ನು ಕೊಟ್ಟಿದೆ, ಕೋಲಾರ ಜಿಲ್ಲೆಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಪ್ರಾರಂಭ ಮಾಡುತ್ತೇವೆ.

ಶ್ರೀ ಅಪ್ಪಚ್ಚು ರಂಜನ್ (ಎಂ.ಪಿ) :— ಕೊಡಗು ಜಿಲ್ಲೆಗೆ ಎರಡು ಮಂತ್ರಿಗಳನ್ನು ಕೊಟ್ಟರೆ ಸಾಲದು, ಜಿಲ್ಲೆಗೆ ಒಂದು ಫೈಸೆ ಹಣವನ್ನು ಕೊಟ್ಟಿಲ್ಲವೆಂದರೆ ಎಂತಹ ನಾಚಿಕೆಗೇಡು ವಿಚಾರ, ಇನ್ನು ಮುಂದಾದರೂ ಈ ಜಿಲ್ಲೆಯನ್ನು ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ :— ಮೈಸೂರು-ಬಂಟ್ವಾಳ 213 ಕಿ.ಮೀ. ರಸ್ತೆ ಅದರಲ್ಲಿ ಸೇರಿರುತ್ತದೆ.

ಶ್ರೀ ಹಂಪನಗೌಡ ಬಾದರ್ಲಿ ಮಾನ್ಯ ಅಧ್ಯಕ್ಷರೆ, ಈ ರಸ್ತೆಯನ್ನು ಎರಡು ಹಂತದಲ್ಲಿ ಪುನ:ಶ್ಚೇತನಗೊಳಿಸಲು ತೆಗೆದುಕೊಳ್ಳಲಾಗಿದೆ. ಮೊದಲನೆಯ ಹಂತದಲ್ಲಿ ಬೀದರ್ ನಿಂದ ಶ್ರೀ ರಂಗಪಟ್ಟಣ, ಎರಡನೆಯ ಹಂತದಲ್ಲಿ ಹತ್ತಿಗೂಡಿನಿಂದ ಹಿರಿಯೂರಿನವರೆಗೆ ತೆಗೆದುಕೊಳ್ಳಲಾಗಿದೆ. ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳುವುದೇನೆಂದರೆ, ಮೊದಲನೆಯ ಹಂತದಲ್ಲಿ ರಸ್ತೆಯನ್ನು ಪುನ:ಶ್ಚೇತನಗೊಳಿಸುವಂಹ ವಿಚಾರದಲ್ಲಿ ಏಳು ಮೀಟರ್ ರಸ್ತೆಯನ್ನು ತಾವು ತಮ್ಮ ಅಂದಾಜುಪಟ್ಟಿಯಲ್ಲಿ ಮಾಡಿಕೊಂಡಿದ್ದೀರಿ. ಎರಡನೆಯ ಹಂತದಲ್ಲಿರತಕ್ಕಂತಹ ರಸ್ತೆಗಳು ಏನಿದೆ, ಮೇಜರ್ ಮೇಂಟೆನೆನ್ಸ್ ಮತ್ತು ಮೇಂಟೆನೆನ್ಸ್‌ನಲ್ಲಿ ಕೇವಲ 3 ಮೀಟರ್ ರಸ್ತೆಯನ್ನು ಹಿರಿಯೂರು ಮತ್ತು ಹತ್ತಿಗೂಡಿನಿಂದ ಸಾರಿಗೆ ಸಂಪರ್ಕವಿರುವುದರಿಂದ ಅದನ್ನು ಕೂಡ ಈ ಮೇಜರ್ ಮೇಂಟೆನೆನ್ಸ್‌ನಲ್ಲಿ ಸೇರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ದಯವಿಟ್ಟು ಇದಕ್ಕೆ ತಾವು ಉತ್ತರವನ್ನು ನೀಡಬೇಕು.

ಶ್ರೀ ಧರ್ಮಸಿಂಗ್ :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಲ್ಮಲ ಮತ್ತು ಸಿಂಧನೂರು, ಬೂದಿಗುಂಪ್ಪ ಇದೆ. ಎಲ್ಲವನ್ನೂ ಕೂಡ ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೇರಿಸಿದ್ದೇವೆ.

ಶ್ರೀ ಹಂಪನಗೌಡ ಬಾದರ್ಲಿ :— ಬೀದರ್ ಮತ್ತು ಹತ್ರಿಗೂಡಿ ಮೇಜರ್ ಮೇಂಟಿನೆನ್ಸ್‌ನಲ್ಲಿ ಸೇರಿಸಿದ್ದೀರಿ. ಅದು ಏಳು ಮೀಟರ್ ರಸ್ತೆಯಾಗಿದೆ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೆ, ಜಾಗತಿಕ ಬ್ಯಾಂಕಿನ ನೆರವಿನಿಂದ ಕೇವಲ 19 ಜಿಲ್ಲೆಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಹಾವೇರಿ ಜಿಲ್ಲೆಗೆ ಇದರಲ್ಲಿ ಒಂದು ರೂಪಾಯಿಯು ಕಾಣುತ್ತಿಲ್ಲ. ಒಂದು ವೇಳೆ ಜಾಗತಿಕ ಬ್ಯಾಂಕಿನ ನೆರವಿನಿಂದ ತೆಗೆದುಕೊಳ್ಳದಿದ್ದರೆ, ಹುಡ್ಕೋ ನೆರವಿನಿಂದ ಹಾವೇರಿ ಜಿಲ್ಲೆಯ ಯಾವ ರಸ್ತೆಯನ್ನು ತೆಗೆದುಕೊಂಡಿದ್ದೀರಾ? ಈ ಪಟ್ಟಿಯನ್ನು ನೋಡಿದರೆ ಒಂದೊಂದು ಜಿಲ್ಲೆಗೆ 150 ಕೋಟಿ, 200 ಕೋಟಿ, 300 ಕೋಟಿ ರೂಪಾಯಿಗಳು ಈ ರೀತಿಯಾಗಿ ಕೊಟ್ಟಿದ್ದು, ಕೆಲವೊಂದು ಜಿಲ್ಲೆಗೆ 1 ಮತ್ತು 2 ಕೋಟಿ ಹೀಗೆ ಹೆಚ್ಚು ಕಡಿಮೆಯಾಗುತ್ತಿದೆಯಲ್ಲಾ ಇದಕ್ಕೆ ಕಾರಣವೇನು? ಹಾವೇರಿ ಜಿಲ್ಲೆಯಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಯಾವಯಾವ ರಸ್ತೆಗಳನ್ನು ತೆಗೆದುಕೊಂಡಿದ್ದೀರಿ? ಅದನ್ನು ಯಾವಾಗ ಮೇಲ್ದರ್ಜೆಗೆ ಏರಿಸುತ್ತೀರಿ? ಜಾಗತಿಕ ಬ್ಯಾಂಕಿನಲ್ಲಿ ಆಗದಿದ್ದರೂ ಸಹ ಅದನ್ನು ಹುಡ್ಕೋ ನೆರವಿನಲ್ಲಿಯಾದರೂ ಸಹ ತೆಗೆದುಕೊಳ್ಳಬೇಕಲ್ಲವೇ?

ಶ್ರೀ ಧರ್ಮಸಿಂಗ್ :— ಮಾನ್ಯ ಸದಸ್ಯರಾದ ಶ್ರೀ ಕೋಳಿವಾಡ್‌ರವರಿಗೆ ಗೊತ್ತಾಗಿರಬಹುದು. ಹಾವೇರಿ ಬೈಪಾಸ್ ರೋಡಿಗೆ 49 ಕೋಟಿ ರೂಪಾಯಿಗಳು, ರಾಣೆಬೆನ್ನೂರು ರಸ್ತೆಗೆ ಕೂಡಿದಂತೆ 45 ಕೋಟಿ ರೂಪಾಯಿಗಳು ಸೇರಿದಂತೆ ಒಟ್ಟು 94 ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿಗಳಿಗಾಗಿ ತೊಡಗಿಸಲಾಗಿದೆ. ಈಗಾಗಲೇ ಕೆಲಸಗಳು ಪ್ರಾರಂಭವಾಗಿದೆ, ಇದರಲ್ಲಿ ಯಾವುದೇ ತಾರತಮ್ಯಗಳಿಲ್ಲ. ಬೆಂಗಳೂರಿನಿಂದ ಬೆಳಗಾಂಗೆ ಹೋಗುವ ರಸ್ತೆ ಕೂಡ ಅಭಿವೃದ್ಧಿ ಮಾಡತಕ್ಕಂಥ ಕೆಲಸದಲ್ಲಿ ಮಾಡಿರುತ್ತೇವೆ.

ಶ್ರೀ ಎಸ್. ಅಂಗಾರ :— ಮಾನ್ಯ ಅಧ್ಯಕ್ಷರೆ, ಮೈಸೂರು ಮತ್ತು ಬಂಟ್ವಾಳ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 20 ಕಿ.ಮೀ. ರಸ್ತೆ ಟೆಂಡರ್ ಮುಖಾಂತರ 90 ಲಕ್ಷ ರೂಪಾಯಿಗಳದ್ದಾಗಿತ್ತು. ಕೆಲಸಗಳಾಗಿ ಮೂರು ತಿಂಗಳಾದರೂ ಕೂಡ ಆ ರಸ್ತೆ ಪೂರ್ತಿ ಹಾಳಾಗಿದೆ, ಇವರ ಮೇಲೆ ಮಾನ್ಯ ಲೋಕೋಪಯೋಗಿ ಸಚಿವರು ಯಾವ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬೇಕು.

ಶ್ರೀ ಧರ್ಮಸಿಂಗ್ :— ಇದರ ಬಗ್ಗೆ ಜಾಗ್ರತೆಯಾಗಿ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಕರಡಿ ಸಂಗಣ್ಣ :— ಮಾನ್ಯ ಅಧ್ಯಕ್ಷರೆ, ಸ್ಟೇಟ್ ಹೈವೇಗಳನ್ನು ಪುನಶ್ಚೇತನ ಮಾಡುವುದಕ್ಕೆ ತಾವು ಹಾಕಿಕೊಂಡಿರತಕ್ಕ ಕಾರ್ಯಕ್ರಮಕ್ಕೆ ನಾವು ಸ್ವಾಗತವನ್ನು ಮಾಡುತ್ತೇವೆ.

ಕೊಪ್ಪಳ ಜಿಲ್ಲೆಯಲ್ಲಿ ಪ್ಯಾಕೇಜ್ ಕೆಲಸದಲ್ಲಿ ಪಾಟ್ ಹೋಲ್ ಮತ್ತು ವೈಡ್‌ನಿಂಗ್ ಮಾಡತಕ್ಕಂಥದ್ದು, ಎರಡಕ್ಕೆ ಮಾತ್ರ ಪ್ರಾವಿಜನ್ ಮಾಡಿಕೊಂಡಿರುತ್ತಾರೆ. ಆದರೆ ಕೆಲವು ಭಾಗದಲ್ಲಿ ರಸ್ತೆಗಳು ಪೂರ್ಣಹಾಳಾಗಿರುತ್ತವೆ. ಅದಕ್ಕೆ ತಾವು ರೀಕಾರ್ಪೆಟ್ ಮಾಡುವ ವ್ಯವಸ್ಥೆಯನ್ನು ಮಾಡಿಕೊಂಡಿರುವುದಿಲ್ಲ. ಇದಕ್ಕೆ ವಿಶೇಷ ಅನುದಾನವನ್ನು ತಾವು ಕೊಡುತ್ತೀರಾ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್:— ರೀಕಾರ್ಪೆಟಿಂಗ್ ಮಾಡುವ ವ್ಯವಸ್ಥೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಇದಕ್ಕ ಬಹಳ ಹಣ ಬೇಕಾಗುತ್ತದೆ. ಇದನ್ನು ಮಾಡತಕ್ಕಂತಹ ಆಲೋಚನೆ ಇರುತ್ತದೆ.

ಶ್ರೀ ಬಿ.ಆರ್. ಯಾವಗಲ್:— ಮಾನ್ಯ ಅಧ್ಯಕ್ಷರೆ, ಬೆಳಗಾಂ, ಸಿಂಧನೂರು ರಸ್ತೆಯನ್ನು ತಾವು ಮೇಲ್ದರ್ಜೆಗೇರಿಸುವುದು ಹಾಗೂ ಮೆಂಟಿನೆನ್ಸ್ ಕೊಡುತ್ತಿದ್ದೀರಿ, ಆ ಮೆಂಟಿನೆನ್ಸ್ ಮಾಡುವ ಬಗ್ಗೆ ತಾವು ಏನಾದರೂ ಒಂದು ಗೈಡಲೈನ್ಸ್‌ನ್ನು ಮಾಡಿ ಏನು ಕಂಡಿಷನ್ ಹಾಕಿದ್ದೀರಿ? ಈ ರಸ್ತೆಯನ್ನು ಎಷ್ಟು ವರ್ಷದಲ್ಲಿ ಮೇಲ್ದರ್ಜೆಗೇರಿಸುತ್ತೀರಿ?

ಶ್ರೀ ಧರ್ಮಸಿಂಗ್:— ಎಲ್ಲಿ ಸಮರ್ಪಕವಾಗಿ ಕೆಲಸವಾಗುತ್ತಿಲ್ಲವೋ, ಅಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಂತೆ ಮಂಗಲಗ್ರಾಮಕ್ಕೆ ರೆಸಾರ್ಟ್ ಪ್ರಾರಂಭ ಮಾಡಲು ಅನುಮತಿ.

249(2758) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ):— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಂತೆ ಮಂಗಲ ಗ್ರಾಮಕ್ಕೆ ಸೇರಿದ ಜಮೀನಿನಲ್ಲಿ ರೆಸಾರ್ಟ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿದೆಯೇ?

ಆ) ಬಂದಿದ್ದರೆ ಅದರ ಬಗ್ಗೆ ವಿವರ ಒದಗಿಸುವುದು.

ಇ) ಕಂದಾಯ ಇಲಾಖೆ, ಅರಣ್ಯ ಇಲಾಖೆ, ಪರಿಸರ ಇಲಾಖೆ ಮತ್ತು ಗ್ರಾಮ ಪಂಚಾಯಿತಿಗಳಿಂದ ಅನುಮತಿ ಪಡೆಯಲಾಗಿದೆಯೆ?

ಈ) ಉದ್ದೇಶಿತ ರೆಸಾರ್ಟ್ ಮಾಲೀಕರು ಜಮೀನಿನ ಒಡೆತನ ಹೊಂದಿದ್ದಾರೆಯೇ?